

## ಬಾಕ್ಸಾಫೀಸ್ ಬಾದ್‌ಶಾ!

ಬಾಲಿವುಡ್‌ನಲ್ಲಿ ಯಾವ ಹೀರೋ ಬೇಕಿದ್ದರೂ ಬಾದ್‌ಶಾ, ಬಾದ್‌ಶಾಹೊ, ಬೇನಾಮ್ ಬಾದ್‌ಶಾ ಎಂದೆಲ್ಲ ಹೆಸರಿಟ್ಟುಕೊಳ್ಳಲಿ; ಬಾಕ್ಸಾಫೀಸಿನ ನಿಜವಾದ ಬಾದ್‌ಶಾ ಈಗಲೂ ಸಲ್ಮಾನ್ ಖಾನ್! 2017ರಲ್ಲೂ ಸಲ್ಮಾನ್ ಖಾನ್‌ನ ಈ ಬಾಕ್ಸಾಫೀಸ್ ನಾಗಾಲೋಟ ಮುಂದುವರಿದಿದೆ. ‘ಬಾಹುಬಲಿ–2’ ಸಿನಿಮಾದ ಹೊಸ ಕಲೆಕ್ಷನ್ ದಾಖಲೆಯನ್ನು ಹೊರತು ಪಡಿಸಿದರೆ, ಸಲ್ಮಾನ್‌ನೇ ಕಲೆಕ್ಷನ್ ಕಿಂಗ್. ಕಳೆದ ಹಲವು ವರ್ಷಗಳಿಂದಲೂ ನಿರ್ಮಾಪಕರು ಸಲ್ಮಾನ್ ಮೇಲೆ ಕೋಟಿಗಟ್ಟಳೆ ಹಣ ಹೂಡುತ್ತಿದ್ದಾರೆ, ಹಾಗೆಯೇ ಲಾಭ ಪಡೆಯುತ್ತಿದ್ದಾರೆ. 2012ರಲ್ಲಿ ಸಲ್ಮಾನ್ ಅಭಿನಯದ ‘ಏಕ್ ಥಾ ಟೈಗರ್’ ಮೇಲೆ ನಿರ್ಮಾಪಕರು 92 ಕೋಟಿ ರೂಪಾಯಿ ಹೂಡಿದ್ದರು. ಅದು 198 ಕೋಟಿ ರೂಪಾಯಿ ಗಳಿಸಿತು. 2015ರಲ್ಲಿ ‘ಪ್ರೇಮ್ ರತನ್ ಧನ್ ಪಾಯೊ’ ಚಿತ್ರಕ್ಕೆ ನಿರ್ಮಾಪಕರು 180 ಕೋಟಿ ರೂಪಾಯಿ ಸುರಿದಿದ್ದು, ಅದು ಬಾಕ್ಸಾಫೀಸ್‌ನಲ್ಲಿ 206 ಕೋಟಿ ರೂಪಾಯಿ ಗಳಿಸಿತು. 2016ರಲ್ಲಿ ‘ಸುಲ್ತಾನ್’ ಚಿತ್ರಕ್ಕೆ 145 ಕೋಟಿ ರೂಪಾಯಿ ಖರ್ಚು ಮಾಡಿದ್ದರೆ, ಗಳಿಕೆ 301 ಕೋಟಿ ರೂಪಾಯಿ ದಾಟಿತು! 2017ರಲ್ಲೂ ‘ಟ್ಯೂಬ್‌ಲೈಟ್’ ನಿರ್ಮಾಪಕರು 100 ಕೋಟಿ ರೂಪಾಯಿ ಖರ್ಚು ಮಾಡಿದ್ದು 121 ಕೋಟಿ ರೂಪಾಯಿ ಗಳಿಕೆಯಾಗಿದೆ.

ಶಾರೂಕ್, ಅಮೀರ್, ಹೃತಿಕ್ ರೋಶನ್, ಅಜಯ್ ದೇವಗನ್ ಮುಂತಾದ ಹೀರೋಗಳು ಸುದ್ದಿ ಮಾಡುವುದರಲ್ಲಿ ಮತ್ತು ಅತ್ಯುತ್ತಮ ಸಿನಿಮಾಗಳನ್ನು ಕೊಡುವುದರಲ್ಲಿ ಸಲ್ಮಾನ್‌ನನ್ನು ಮೀರಿಸಿದ್ದರೂ, ಬಾಕ್ಸಾಫೀಸ್‌ನಲ್ಲಿ ವಿಫಲರಾದದ್ದೇ ಹೆಚ್ಚು. 2010ರಲ್ಲಿ ಶಾರೂಕ್ ಖಾನ್ ನಟಿಸಿದ ‘ಮೈ ನೇಮ್ ಈಸ್ ಖಾನ್’ 85 ಕೋಟಿ ರೂಪಾಯಿ ಸುರಿದು, 72.87 ಕೋಟಿ ರೂಪಾಯಿ ಗಳಿಸಿತು. 2011ರಲ್ಲಿ ಭಾರೀ ಸುದ್ದಿ ಮಾಡಿದ ಶಾರೂಕ್ ಖಾನ್‌ನ ‘ರಾ ಒನ್’ ಸಿನಿಮಾಕ್ಕೆ 130 ಕೋಟಿ ರೂಪಾಯಿ ಖರ್ಚು ಮಾಡಿದರೂ, ಕಲೆಕ್ಷನ್ ಆದದ್ದು 113 ಕೋಟಿ ಮಾತ್ರ. 2014ರಲ್ಲಿ ಹೃತಿಕ್ ರೋಶನ್ ಅಭಿನಯದ ‘ಬ್ಯಾಂಗ್ ಬ್ಯಾಂಗ್’ ಚಿತ್ರಕ್ಕೆ 160 ಕೋಟಿ ಖರ್ಚಾದರೂ ಕಲೆಕ್ಷನ್ ಆದದ್ದು 141 ಕೋಟಿ ಮಾತ್ರ.

ಸಲ್ಮಾನ್ ಈಗಲೂ ಶತಕೋಟಿ ನಿರ್ಮಾಪಕರ ಡಾರ್ಲಿಂಗ್. ಡಿಸೆಂಬರ್‌ನಲ್ಲಿ ‘ಟೈಗರ್ ಜಿಂದಾ ಹೈ’ ತೆರೆಗೆ ಬರಲಿದ್ದರೆ, ಮುಂದಿನ ವರ್ಷ ‘ಭರತ್’ ಮತ್ತು ‘ಧಬಾಂಗ್ 3’ ಸಿದ್ಧವಾಗಲಿದೆ.

## ಮರಳಿ ಬಂದಳು ಶ್ರದ್ಧಾ

ಪ್ರಭಾಸ್ ಅಭಿನಯದ ಚತುರ್ಭಾಷಾ ಚಿತ್ರ ‘ಸಾಹೊ’ಗೆ ಹೀರೋಯಿನ್ ಆಗಿ ಶ್ರದ್ಧಾ ಕಪೂರ್ ಮರಳಿ ಬಂದಿದ್ದಾಳೆ. ಈ ಹಿಂದೆ ಭಾರೀ ಮೊತ್ತದ ಸಂಭಾವನೆ ಕೇಳಿದ್ದ ಕಾರಣಕ್ಕೆ ಶ್ರದ್ಧಾಳನ್ನು ಕೈಬಿಟ್ಟ ನಿರ್ಮಾಪಕರು ಅನೂಷ್ಕಾ ಶೆಟ್ಟಿಯನ್ನು ಆಯ್ಕೆ ಮಾಡಿಕೊಂಡಿದ್ದರು.

‘ಸಾಹೊ’ ಆ್ಯಕ್ಷನ್ ಚಿತ್ರವಾಗಿದ್ದು ಬಾಹುಬಲಿ–2 ಚಿತ್ರಕ್ಕಿಂತಲೂ ಅದ್ದೂರಿಯಾಗಿ ತಯಾರಾಗಲಿದೆಯಂತೆ. ಅದಕ್ಕೇ ಹೀರೋಯಿನ್ ತುಂಬಾ ತೆಳ್ಳಗೆ ಇರಬೇಕೆಂಬುದು ನಿರ್ದೇಶಕರ ಇರಾದೆ. ಶೂಟಿಂಗ್ ದಿನಾಂಕಗಳೆಲ್ಲವೂ ನಿಗದಿಯಾಗಿದ್ದು ಆ ಅವಧಿಯಲ್ಲಿ ಅಷ್ಟೊಂದು ತೂಕ ಕಳೆದುಕೊಳ್ಳಲು ಅನೂಷ್ಕಾಗೆ ಸಾಧ್ಯವಿಲ್ಲ ಎನ್ನುವುದು ಖಚಿತವಾಗಿ ನಿರ್ಮಾಪಕರು ಶ್ರದ್ಧಾಳ ಮೊರೆ ಹೋದರಂತೆ. ಎರಡನೆ ರೌಂಡ್‌ನಲ್ಲಿ ಶ್ರದ್ಧಾ ತನ್ನ ಸಂಭಾವನೆಯನ್ನೂ ಕಡಿತ ಮಾಡಿದ್ದು, ತೂಕವನ್ನೂ ಕಡಿತ ಮಾಡಿಕೊಳ್ಳಲು ಒಪ್ಪಿದ್ದಾಳಂತೆ. ಅಂದ ಹಾಗೆ ಈ ಚಿತ್ರ ಹಿಂದಿ, ತಮಿಳು, ತೆಲುಗು, ಮಲಯಾಳಂ ಗಳಲ್ಲಿ ತಯಾರಾಗಲಿದೆ. ಈ ಚಿತ್ರದ ಶೂಟಿಂಗ್ ಮುಗಿದ ತಕ್ಷಣ ಶ್ರದ್ಧಾ, ‘ಹಸೀನಾ ಪಾರ್ಕರ್’ ಚಿತ್ರದ ಗ್ಯಾಂಗ್‌ಸ್ಟರ್ ಪಾತ್ರಕ್ಕೆ ಮತ್ತೆ ತೂಕ ಹೆಚ್ಚಿಸಿಕೊಳ್ಳಲಿದ್ದಾಳೆ!

■ ಬಿಂದು

